


‘ಇಲ್ಲ ಸರ್, ನನ್ನದೇನಿದ್ರೂ ಲಾಂಗ್ ಹ್ಯಾಂಡ್ ಅಷ್ಟೇ, ಜೂನಿಯರ್‌ಗೆ ಸೇರಿದ್ದೆ. ಏಕಾಗ್ರತೆ, ನೆನಪಿನ ಶಕ್ತಿ ಚೆನ್ನಾಗಿರಬೇಕು, ಡಿಕ್ಟೇಷನ್ ತೊಗೋಬೇಕಾದ್ರೆ ಒಂದು ಕ್ಷಣ ವಿಚಲಿತರಾದರೂ ಪೆನ್ ಡೌನ್, ಟ್ರೈ ಮಾಡಿ ಬಿಟ್ಟೆ ಸರ್, ಕೇವಲ ಚುಕ್ಕಿ, ರೇಖೆ ಅಂಕುಡೊಂಕುಗಳಲ್ಲಿ ನಿಮಿಷಾರ್ಧದಲ್ಲಿ ಪ್ಯಾಸೇಜ್ ಮೂಡಿಸುವುದು ನಿಜವಾಗಲೂ ಚಾಲೆಂಜಿಂಗ್. ಸಾರಿ ಸರ್, ಅಗತ್ಯಕ್ಕಿಂತ ಹೆಚ್ಚು ಮಾತನಾಡಿದೆ’ ಎಂದ.

★★★

ಮತ್ತೆ ‘ತ್ರಿಕರ’ದ ಭೂತ.

ಥಟ್ಟನೆ ಏನೋ ಹೊಳೆದಂತೆ ಅಂದಿನ ಹಾಜರಾತಿ ಶೀಟ್ ತರಿಸಿಕೊಂಡು ನೋಡಿದೆ. ನಿನ್ನೆಯ 19 ಮಂದಿಯೊಂದಿಗೆ ಇನ್ನೂ ಹನ್ನೆರಡು ಮಂದಿ ಗೈರು. ಅದರಲ್ಲಿ ಪ್ರಭಾಕರನ ಹೆಸರು ಇದೆ. ಅಂದರೆ ಮೊದಲಿನ ಲಿಸ್ಟ್‌ನಲ್ಲಿ ಉಳಿದಿರುವುದು ದಿನಕರ ಮಾತ್ರ.